ನೀಡಲೊಪ್ಪಿದ್ದರಿಂದ, ಕಿಶುವಿನೊಂದಿನ ಮಾತುಕತೆ ಮುರಿದು ಬಿದ್ದಿತ್ತು.

ಮನೆಯಲ್ಲೇಕೆ ವಾಸ್ತವ್ಯವಿಲ್ಲವೆನ್ನುವ ಪ್ರಶ್ನೆಗೆ, ಮನೆ ಕಟ್ಟುವ ಕಾಲಕ್ಕೇ ಮಿಟ್ಟು ಮಾಚಯ್ಯ ಬಾಡಿಗೆಗೆ ಬೇಕೆಂದು ಕೇಳಿದ್ದರಿಂದ, ತನ್ನ ತಂದೆ ಬಾಡಿಗೆಗೆ ನೀಡಿದ್ದು, ಈಗ ಆತನ ಮಗ ಮಿಟ್ಟು ಚೆಂಗಪ್ಪ ವಾಸಿಸುತ್ತಿದ್ದು, ಸದ್ಯ ಆತ ಅಮೆರಿಕದಲ್ಲಿರುವುದರಿಂದ, ವಾಸ್ತವ್ಯವಿಲ್ಲವೆಂದು ಶಮಿ ಉತ್ತರಿಸಿದ. ಈಗ ಮನೆ ಮಾರಬೇಕಾಗಿದ್ದರಿಂದ ಖಾಲಿ ಮಾಡಲು ಚೆಂಗಪ್ಪನಿಗೆ ಹೇಳಿದ್ದಾಗಿ ತಿಳಿಸಿದ. ಆ ಗೀಚು ಬರಹದಲ್ಲಿದ್ದ ವಿಳಾಸದ ಬಗ್ಗೆ ಆತನಿಗೂ ಏನೂ ಹೊಳೆಯಲಿಲ್ಲ. ಕರಮಚಂದ ಮನೆಯನ್ನು ನೋಡಬೇಕೆಂದಾಗ, ಶಮಿ ಕುಂಟುತ್ತಲೇ ಹೊರಟ.

ಬೀಗ ತೆಗೆದು ಒಳಗಡಿಯಿಡುತ್ತಲೂ, ಗಮನ ಸೆಳೆದುದು, ನೆಲದ ಮೇಲೆ ಹರಡಿದ ದೂಳಿನಲ್ಲಿ ಸ್ಪಷ್ಟವಾಗಿ ಮೂಡಿದ ಶೂ ಹೆಜ್ಜೆ ಗುರುತುಗಳು! ಅವು ಎಲ್ಲಾ ಕೋಣೆಗಳಲ್ಲೂ ಇದ್ದವು. ಯಾರೋ ಮನೆ ತುಂಬಾ ಓಡಾಡಿದ್ದಾರೆ! ಕರಮಚಂದ ಬಗ್ಗಿ, ಶೂಗಳ ಗುರುತನ್ನು ಪರೀಕ್ಷಿಸಿ, ಉಚ್ಚರಿಸಿದ,

"ಇವು ನೈಕ್ ಅಥವಾ ವುಡ್ ಲ್ಯಾಂಡ್ ರನ್ನಿಂಗ್ ಶೂಗಳದ್ದು. ಅಳತೆ ಒಂಬತ್ತು. ವ್ಯಕ್ತಿ ತುಂಬಾ ಎತ್ತರದವನಲ್ಲ!"

ಕಿಚನ್ ಸನಿಹ ಬಂದಾಗ, ಭುಸ್! ಎಂಬ ಸ್ವರ ನಮ್ಮನ್ನು ಬೆಚ್ಚಿಬೀಳಿಸಿತು. ಶಮಿ ದೀಪ ಹಾಕಿದ. ಮೂಲೆಯಲ್ಲಿ ಹೆಡೆಬಿಚ್ಚಿದ ನಾಗರಹಾವು!!

"ಎಲ್ಲಾ ಕಿಟಕಿಗಳೂ ಮುಚ್ಚಿದ್ದರೂ, ಇದು ಹೇಗೆ ಒಳಗೆ ಬಂದಿತು? ಈ ಜಾಗದಲ್ಲಿ ನಾಗನ ವಾಸವಿದೆ ಅಂತ ಉತ್ತಯ್ಯ ಹೇಳಿದ್ದು ನಿಜವಿರಬಹುದೇ?" ಶಮಿ ಸ್ವಗತದಂತೆ ನುಡಿದ.

ಈ ಜಾಗದಲ್ಲಿ ನಾಗನಿದ್ದು ಇದನ್ನು ಮಾರಬಾರದೆಂದು ಉತ್ತಯ್ಯ ಹೇಳುತ್ತಿದ್ದನಂತೆ. ಆ ಜಾಗ ತನಗೆ ನೀಡಿದರೆ, ತಾನು ನಾಗಾರಾಧನೆ ಮುಂದುವರೆಸುವುದಾಗಿ ಅಂದಿದ್ದನಂತೆ. ಶಮಿ ವಿವರ ನೀಡುವಾಗ, ಹಾವು ಕಪಾಟಿನ ಹಿಂದೆ ಮರೆಯಾಯಿತು.

"ಈ ಹೆಜ್ಜೆಗಳು ಹಾವನ್ನು ಮನೆಯೊಳಗಿರಿಸಿದ ವ್ಯಕ್ತಿಯದ್ದಿರಬೇಕು! ಆದರೆ ಹಾವನ್ನು ಮನೆಯೊಳಗೆ ಇರಿಸಿದ್ದೇಕೆ?"

"ಬಿದ್ದಪ್ಪ, ನಿನ್ನ ಊಹೆ ಸರಿಯಿಲ್ಲ. ನೋಡಲ್ಲಿ ಗೋಡೆಯಲ್ಲಿ ಗುರುತು! ದೂಳು ಅಳಿಸಿಹೋಗಿದೆ ಮೇಲಿನಿಂದ ಕೆಳಕ್ಕೆ ರೇಖೆಯಂತೆ! ಅಂದರೆ ಹಾವು ಮೇಲಿನ ಗಾಳಿಗಾಗಿ ಇರಿಸಿದ ರಂಧ್ರದ ಮೂಲಕ ಬಂದಿದೆ. ಹಾವು ಗೋಡೆಯೇರುವುದು ಅಸಾಧ್ಯ. ಯಾರೋ ಅದನ್ನು ಅಲ್ಲಿಂದ ಕೆಳಕ್ಕೆ ಇಳಿಸಿರಬೇಕು! ಹಾವನ್ನಿರಿಸಿದ ಉದ್ದೇಶ ಬಹುಶಃ ಬಿಲ್ಡರನನ್ನು ಬೆದರಿಸಲು! ಹಾವು ಓಡಾಡುವ ಜಾಗವೆಂದರೆ ಜನ ಭಯಪಡುತ್ತಾರೆ, ಖರೀದಿಸಲು ಹಿಂದೇಟು ಹಾಕುತ್ತಾರೆ."

"ಹಾಗಿದ್ದರೆ ಹೆಜ್ಜೆಗುರುತು ಯಾರದ್ದು? ಎಲ್ಲಾ ಗುರುತುಗಳು ಒಂದೇ ತೆರನಾಗಿರೋದರಿಂದ, ಒಬ್ಬನೇ ಒಳಗೆ ಬಂದಂತಿದೆ. ಬೀಗ ಮುರಿಯದೇ ಹೇಗೆ ಬಂದ?"

"ನಾನು ಯಾರಿಗೂ ಕೀ ಕೊಟ್ಟಿಲ್ಲ. ಈ ಮನೆಯ ಒಂದು ಕೀ ಚೆಂಗಪ್ಪನ ಸಂಬಂಧಿ ಜಾಲು ತಿಮ್ಮಯ್ಯನಲ್ಲಿದೆ. ಚೆಂಗಪ್ಪ ಊರಿಗೆ ಬರೋವಾಗ, ಮನೆ ಸ್ವಚ್ಛಗೊಳಿಸಿಡುತ್ತಾನಂತೆ." ಶಮಿ ಪ್ರತಿಕ್ರಿಯಿಸಿದ.

ಕರಮಚಂದನ ಸೂಚನೆಯಂತೆ ಶಮಿ ತಿಮ್ಮಯ್ಯನಿಗೆ ಕರೆ ಮಾಡಿ, ಕೀ ಎಲ್ಲಿದೆ ಎಂದು ಕೇಳಿದ್ದಕ್ಕೆ, ಆತನ ಉತ್ತರ ಮೊಬೈಲಿನ ಸ್ಪೀಕರಿನಲ್ಲಿ ತೂರಿ ಬಂತು,

"ಕೀ ನನ್ನಲ್ಲೇ ಇದೆ. ಯಾರಿಗೂ ಕೊಟ್ಟಿಲ್ಲ. ಹಾಂ... ಕೆಲವು ತಿಂಗಳ ಹಿಂದೆ, ಮನೆಯಲ್ಲಿ ರಿಪೇರಿ ಮಾಡಿಸಿದಾಗ, ಇಲೆಕ್ಟ್ರೀಷಿಯನ್ ಕೀಯನ್ನು ಉತ್ತಯ್ಯನಲ್ಲಿ ಕೊಟ್ಟು ಹೋಗಿದ್ದ. ಅವತ್ತು ಅರ್ಜೆಂಟಾಗಿ ನನಗೆಲ್ಲೋ ಹೋಗಬೇಕಾಗಿತ್ತು. ಮರುದಿನ ನಾನು ಕೀಯನ್ನು ತೆಗೆದುಕೊಂಡೆ."

"ಹಾಗಿದ್ದರೆ ಉತ್ತಯ್ಯ ಡೂಪ್ಲಿಕೇಟ್ ಕೀ ಮಾಡಿಸಿರಬಹುದೇ?"

ನನ್ನ ಪ್ರಶ್ನೆಗೆ 'ಇರಲೂಬಹುದು' ಎಂದ ಕರಮಚಂದ ತಿಮ್ಮಯ್ಯನ ಚರವಾಣಿಯ ಸಂಖ್ಯೆಯನ್ನು ಗುರುತಿಸಿಕೊಂಡ. ನಂತರ ಹುಡುಕಾಟ ಮುಂದುವರೆಯಿತು.

ಎರಡು ಬೆಡ್ ರೂಮುಗಳ ಚಿಕ್ಕ ಮನೆ. ಒಂದು ದೇವರಕೋಣೆ. ಒಂದು ಮಲಗುವ ಕೊಠಡಿಯ ಗೋಡೆಯಲ್ಲಿ ಬಿಡಿಸಿದ್ದ ಇಗ್ಗುತ್ತಪ್ಪ ದೇವರ ಚಿತ್ರ ಮಸುಕಾಗಿತ್ತು. ಗೋಡೆಯಲ್ಲಿ ನೇತಾಡುತ್ತಿದ್ದ ಒಣಗಿದ ಹೂವುಗಳು, ಅಂಟಿದ್ದ ಕುಂಕುಮ!

"ಚೆಂಗಪ್ಪ ಗೋಡೆಗೂ ಪೂಜೆ ಮಾಡುತ್ತಿದ್ದನೇ?" ಕೇಳಿದ್ದಕ್ಕೆ ಶಮಿ ಉತ್ತರಿಸಿದ,

"ಮಾಚಯ್ಯ ಇಗ್ಗುತ್ತಪ್ಪನ ಭಕ್ತ. ಗುಡಿಯಿರುವ ದಿಕ್ಕಿನ ಗೋಡೆಯಲ್ಲಿ ದೇವರ ಚಿತ್ರ ಹಾಕಿದ ಮೇಲೆ, ತನ್ನ ಅದೃಷ್ಟ ಖುಲಾಯಿಸಿತೆಂದು ಅವನ ನಂಬಿಕೆ."

ಆಮೇಲೆ ನಾವು ಹೊರಗೆ ಬಂದೆವು. ಕರಮಚಂದ ನೇರವಾಗಿ ಹಿಂಭಾಗಕ್ಕೆ ನಡೆದ. ಅಲ್ಲಿ ನೆಲವನ್ನು ಸೂಕ್ಷ್ಮವಾಗಿ ಪರಿಶೀಲಿಸಿದವನು, ಹೇಳಿದ,

"ನಾನು ಊಹಿಸಿದ್ದು ಸರಿಯಾಗಿದೆ. ಇಲ್ಲಿ ನೋಡಿ, ಏಣಿ ಊರಿದ ಗುರುತು. ಯಾರೋ ಏಣಿ ಏರಿ, ಹಾವನ್ನು ಮೇಲಿನ ರಂಧ್ರದಿಂದ ಒಳಕ್ಕೆ ಇಳಿಸಿದ್ದಾರೆ."

ನೆಲದಲ್ಲಿ ಏಣಿಯ ಪಾದದ ಗುರುತುಗಳು ನಿಚ್ಚಳವಾಗಿದ್ದವು.

"ಸಾರ್, ನಾವು ಸಮಯ ವ್ಯರ್ಥ ಮಾಡ್ತಿದ್ದೀವಿ." ಡಿಸೋಜನ ಚಡಪಡಿಕೆ.

"ಈ ತನಿಖೆಗೆ ಬ್ರೇಕ್ ಹಾಕೋಣ. ಆದರೆ ನೀವೀಗ ಶಮಿಯ ಹಲ್ಲೆ ಪ್ರಕರಣವನ್ನು ವಿಚಾರಿಸಬೇಕಲ್ಲ! "

* * *

ವಿರಾಜಪೇಟೆಯ ಹಾವು ಹಿಡಿಯುವವರನ್ನು ಸಂಪರ್ಕಿಸಿ, ಯಾರಾದರೂ ಶಮಿಯ ಮನೆಯೊಳಗೆ ಹಾವು ಇಳಿಸಿದ್ದಾರೆಯೇ ಅಂತ ವಿಚಾರಿಸಲು ಕರಮಚಂದ ನನಗೆ ತಿಳಿಸಿದ್ದ. ನಡುವೆ, ಡಿಸೋಜ ಕರೆ ಮಾಡಿ, ಶಮಿಯ ಮೇಲೆ ಹಲ್ಲೆ ಮಾಡಿದವರ ಫೋಟೋ ಅಂಗಡಿಯೊಂದರ ಸಿ.ಸಿ. ಕ್ಯಾಮೆರಾದಲ್ಲಿ ದೊರಕಿದೆಯೆಂದ. ಕರಮಚಂದ ತಿಮ್ಮಯ್ಯನ ಚರವಾಣಿಯ ಕರೆ ವಿವರ ಪಡೆಯುವುದರಲ್ಲಿದ್ದ.

ವೃತ್ತಿಪರ ಹಾವು ಹಿಡಿಯುವವರ ವಿವರಗಳು ಕರಮಚಂದನ ತಂತ್ರಾಂಶ 'ಪೂರ್ವಾಪರ'ದಲ್ಲಿತ್ತು. ಯಾರದ್ದೋ ಮನೆಯೊಳಗೆ ಹಾವು ಹಾಕಬೇಕಾಗಿದ್ದು, ಮಾಡಿಕೊಡಬಹುದೇ, ಅದಕ್ಕೆಷ್ಟು ವೆಚ್ಚವಾಗುತ್ತೆ ಅಂತ ವಿಚಾರಿಸಿದೆ. ಇದ್ದ ನಾಲ್ಕೈದು ಮಂದಿಗಳೂ ಅಂತಹ ಕೆಲಸ ಮಾಡಲು ನಿರಾಕರಿಸಿದಾಗ ಚಿಂತೆಯಾದರೂ, ಒಬ್ಬಾತ ಮಾತ್ರ ಬಾಯಿ ಬಿಟ್ಟ. ಗುರುವ ಎನ್ನುವಾತ ಇತ್ತೀಚೆಗೆ ಹಾವು ಹಿಡಿಯುವ ಕೆಲಸ ಆರಂಭಿಸಿದ್ದು, ಆತ ಹಣ ಕೊಟ್ಟರೆ ಏನೂ ಬೇಕಾದರೂ ಮಾಡ್ತಾನೆ ಎಂದು, ಆತನ ಸಂಪರ್ಕ ಸಂಖ್ಯೆ ಕೊಟ್ಟ. ಗುರುವನಿಗೆ ಕರೆ ಮಾಡಿ, ಸೂಕ್ಷ್ಮವಾಗಿ ವಿಷಯ ಹೇಳಿ, ಮಾತುಕತೆಗಾಗಿ ಮರುದಿನ ಸಂಜೆ ಹೋಟೇಲೊಂದಕ್ಕೆ ಬರಲು ಸೂಚಿಸಿದೆ.

ಈ ಮಧ್ಯೆ ಕರಮಚಂದ ನನಗೊಂದು ಚರವಾಣಿ ಸಂಖ್ಯೆಗೆ ಕರೆ ಮಾಡುವಂತೆ ಕೇಳಿಕೊಂಡ. ಕರೆ ಮಾಡಿದಾಗ, ಆ ಸಂಖ್ಯೆ ಸ್ವಿಚ್ ಆಫ್ ಆಗಿದೆಯೆಂಬ ಸಂದೇಶ ತೂರಿಬಂತು.

"ಇದು ತಿಮ್ಮಯ್ಯನ ಚರವಾಣಿಯ ಮೂರು ತಿಂಗಳ ಕರೆ ವಿವರಗಳಲ್ಲಿ ಸಿಕ್ಕಿದ ಹೊಸ ಸಂಖ್ಯೆ. ಬೇರೆ ಕೆಲವು ಇದ್ದುವಾದರೂ, ಅವುಗಳೆಲ್ಲವು ಯಾರದ್ದೆಂದು ಪತ್ತೆಯಾಗಿದೆ. ಈ ಸಂಖ್ಯೆ ಒಮ್ಮೆ ಮಾತ್ರ ಚಾಲನೆಯಲ್ಲಿದ್ದು, ಆ ವ್ಯಕ್ತಿ ಕರೆ ಸ್ವೀಕರಿಸಲಿಲ್ಲ. ಆಮೇಲೆ ಅದು ಸ್ವಿಚ್ ಆಫ್ ಆಗಿದೆ. ಆ ಚರವಾಣಿ ಅಂಜಪರವಂಡ ರಂಜು ಎಂಬಾತನ ಹೆಸರಿನಲ್ಲಿದೆ. ನನ್ನ 'ನೆಲೆ' ತಂತ್ರಾಂಶದಲ್ಲಿ ಆ ಸಂಖ್ಯೆಯನ್ನು ಹೊಂದಿಸಿದ್ದು, ಅದು ಚಾಲನೆಗೊಂಡೊಡನೆ ಅಲಾರಂ ಬರುತ್ತದೆ."

"ಆ ಗೀಚು ಬರಹದ ಇಷ್ಟು ಆಳವಾದ ತನಿಖೆ ಅಗತ್ಯವಿದೆಯೇ?"

"ಕೆಲವೊಮ್ಮೆ ಸಣ್ಣ ಸಂಗತಿಗಳಲ್ಲಿ ರೋಚಕವಾದ ವಿಷಯಗಳಿರುವ ಸಾಧ್ಯತೆಯಿರುತ್ತದೆ."

ಮಾರ್ಮಿಕವಾಗಿ ಹೇಳಿದ ಕರಮಚಂದ ಗಣಕಯಂತ್ರದ ಪರದೆಯ ಮೇಲೆ ದೃಷ್ಟಿ ಹೂಡಿದ. ನಾನೂ ನಿರುಕಿಸಿದೆ. ತನ್ನ 'ಪೂರ್ವಾಪರ' ತಂತ್ರಾಂಶದಲ್ಲಿದ್ದ ಇಗ್ಗುತ್ತಪ್ಪ ಗುಡಿಯ ಬಗೆಗಿನ ಮಾಹಿತಿಗಳನ್ನು ಆತ ಓದುತ್ತಿದ್ದ.

* * *

ಮರುದಿನ ಸಂಜೆ ಗುರುವನ ಭೇಟಿಯಾಗಿ ಹಿಂದಿರುಗುವಾಗ, ಸಣ್ಣ ವಿಜಯ ಸಾಧಿಸಿದ ಅನುಭವ. ಸುಲಭದಲ್ಲಿ ಆತ ಬಾಯಿಬಿಡದಿದ್ದಾಗ, ಉಪಾಯದಿಂದ, ಒಬ್ಬಾತನನ್ನು ಮನೆ ಬಾಡಿಗೆಯಿಂದ ಬಿಡಿಸಬೇಕಾಗಿದ್ದು, ಮನೆಯಲ್ಲಿ ವಾಸ್ತವ್ಯವಿರುವಾಗಲೇ, ಹಾವನ್ನು ಒಳಕ್ಕೆ ಸೇರಿಸಬಹುದೇ ಎಂದು ವಿಚಾರಿಸಿದೆ. ಗುರುವನ ಸಾಮರ್ಥ್ಯದ ಕುರಿತು ಅನುಮಾನಿಸಿದಾಗ, ತಾನು ಈ ಹಿಂದೆ ಮಾಡಿದ ಕೃತ್ಯಗಳ ಪಟ್ಟಿ ನೀಡಿದ್ದ. ಅದರಲ್ಲಿ ಶಮಿಯ ಮನೆಯೂ ಸೇರಿತ್ತು!

ಮನೆಗೆ ಮರಳಿದಾಗ, ಕರಮಚಂದ ಎಲ್ಲಿಗೋ ಹೊರಡುವ ತಯಾರಿಯಲ್ಲಿದ್ದಂತಿತ್ತು. ನನ್ನನ್ನು ಕಂಡೊಡನೆ ಕೇಳಿದ,

"ಈ ರಾತ್ರಿ ನಿದ್ದೆ ಬಿಡಲು ತಯಾರಿದ್ದೀಯಾ? ರಂಜು ವಿರಾಜಪೇಟೆಗೆ ಬಂದಂತಿದೆ. ಏಳೂವರೆಯ